

ಕುಣಿಯುವುದಿಲ್ಲ. ಆಗೆಲ್ಲ ಮುಖವಾಡಗಳು ನಕಲಿ ಇರುತ್ತಿದ್ದವು. ಅದಕ್ಕೆ ಕುಣಿಯುತ್ತಿದ್ದರು.

* * *

## ಹೊತ್ತು ಹೋದಂತೆ

ತೆನೆಗಳು ಕಾಳಾಗಿ ಹೊಲದಿಂದ ಆಚೆ ಹೋಗಿಬಿಟ್ಟವು. ಹೊಲ ಖಾಲಿ ಖಾಲಿ. ಎಲ್ಲೆಂದರಲ್ಲಿ ಮೇವು ಬಿದ್ದಿದೆ. ಹೊಲವನ್ನೆಲ್ಲ ತುಳಿದಾಡಿದ ಗುರುತುಗಳ ಜೊತೆಗೆ ಬಾಗಿ, ಬಾಡಿ ಹೋದ ಇತರೆ ಗಿಡಗಳು ಮತ್ತು ಕಾಯಿ ಕೀಳಿಸಿಕೊಂಡು ಬೋಡಾದ ಹರಳಿನ ಗಿಡಗಳು ಮೌನವಾಗಿ ನಿಂತಿವೆ. ಕಾಲುದಾರಿಗಳಲ್ಲಿ ಮುಳ್ಳು ಬೆಳೆದಿದೆ. ಬದುಗಳ ಮೇಲೆ ಬೆಳೆದ ಪರಕೆ ಕಡ್ಡಿಗಳನ್ನು ಕೊಯ್ಯುವವರೇ ಇಲ್ಲ. ದಿನಕ್ಕೆರಡು ಸಾರಿ ನಾನು ಹೋಗಿ ನೋಡಿದ್ದನ್ನೇ ನೋಡಿ ಬರುತ್ತಿದ್ದೇನೆ. ದಾರಿಯಲ್ಲಿ ಮಾತಾಡಿಸಿದವರನ್ನೇ ಮಾತಾಡಿಸಿ ಬರುತ್ತಿದ್ದೇನೆ. ಊರೊಳಗಿಂದ ತಕ್ಕಡಿ ಬಂತು. ಹೋಯಿತು. ಖಾಲಿ ಗಾಡಿ ಬಂದು ಮೂಟೆಗಳನ್ನು ಮುಟ್ಟಿತು. ನಾನೂ ಮೂಟೆಗಳನ್ನು ಮುಟ್ಟಿದೆ. ಎಲ್ಲ ಮೂಟೆಗಳೂ ನನ್ನ ಕಣ್ಣೆದುರೇ ಪರದೇಶಕೆ ಹೊರಟು ಹೋದವು. ಹೊಲದ ಮುಂದೆ ಓಡಾಡುವವರೆಲ್ಲ ಎಷ್ಟು ಮೂಟೆ ಆಯಿತು? ಎಷ್ಟು ಬಂತು, ಎಷ್ಟು ಹೋಯಿತು? ಎಂದು ಕೇಳತೊಡಗಿದರು. ನಾನು ಖಾಲಿ ಚೀಲಗಳನ್ನೆಲ್ಲ ಸುತ್ತಿಕೊಂಡು ಕಟ್ಟಿಕೊಂಡು ಗಾಡಿಯೇರಿದೆ. ಬುತ್ತಿಯನ್ನು ಬರಿದುಮಾಡಿಕೊಂಡ ಕೂಲಿಗಳು ಬಟ್ಟೆ ಕೊಡವಿಕೊಂಡು ಎದ್ದರು. ಮೋಡಗಳ ಮೇವು ಹೊತ್ತುಕೊಂಡು ಹೊರಟ ಹೊತ್ತು ಹೋದಂತೆ ಹೊಲ ಕಾಣೆಯಾಗತೊಡಗಿತು. ಒಂದೊಂದೆ ವಿಷಜಂತುಗಳು ಈಚೆ ಬರತೊಡಗಿದವು. ಹೊಲದಿಂದ ಹೊಲಕ್ಕೆ ಜಾಗ ಬದಲಾಯಿಸಿದವು.

* * *

## ಭಾಷೆ

ಎಲ್ಲಿಂದಲೋ ಹೊರಟು ನಡೆದುಕೊಂಡು ಹೋಗುತ್ತಿದ್ದ ನನಗೆ ಬಿಸಿಲು ಬೆದರಿಸಿತು. ಅರಳಿ ಮರವೊಂದು ಕಣ್ಣರಳಿಸಿ ಕರೆಯಿತು. ಆ ಮರ ಬೃಹದಾಕಾರದ ಬಂಡೆಯ ಸಂದಿಯಿಂದ ಹೊರಟು